**ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ**

**CC No. 853/2018**

| | | |
|---|---|---|
| ಸಾಕ್ಷಿದಾರರ ಹೆಸರು | : | ಆನಂದ್ ಸಿ |
| ತಂದೆಯ ಹೆಸರು | : | ಚಿದಾನಂದ ಕಲ್ಲೋಳಿಕರ್ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಕಮ್ಯುನಿಟಿ ಆಫೈರ್ ಅಫೀಸರ್, ದೊಡ್ಡಬಳ್ಳಾಪುರ |
| ವಾಸಸ್ಥಳ | : | ದೊಡ್ಡಬಳ್ಳಾಪುರ |

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿಃ. 20.01.2026

---

ನಾನು ದಿಃ 07.07.2015 ರಿಂದ 08.02.2018 ರವರೆಗೆ ಚನ್ನಪಟ್ಟಣ ನಗರ ಸಭೆಯ ಪೌರಾಯುಕ್ತನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2018ರ ವಿಧಾನ ಸಭಾ ಚುನಾವಣೆಯ ಚುನಾವಣಾ ನೀತಿ ಸಂಹಿತೆ ಅಡಿಯಲ್ಲಿ ಚನ್ನಪಟ್ಟಣ ನಗರದ ಫ್ಲೈಯಿಂಗ್ ಸ್ಕ್ವಾಡ್ ನ ಮುಖ್ಯಸ್ಥನಾಗಿ ದಿಃ 11.05.2018ರಂದು ಕರ್ತವ್ಯದಲ್ಲಿ ಇದ್ದಾಗ ರಾತ್ರಿ 11-30 ಗಂಟೆ ಸುಮಾರಿಗೆ ಚನ್ನಪಟ್ಟಣ ನಗರದ ಕೋಟೆ ಬೀದಿಯ ಕಡೆ ಬೀಟ್ ಹೋಗಿದ್ದೇವು. ನನ್ನ ಜೊತೆ ಚಾಸಾ-2 ಮತ್ತು ಚಾಸಾ-3 ಇದ್ದರು. ಸದರಿ ಕೋಟೆ ಬೀದಿ ಕಡೆ ಹೋದಾಗ ಒಬ್ಬ ವ್ಯಕ್ತಿ ಆತನ ಹೆಸರು ಬಿ ಮಂಜುನಾಥ ವಯಸ್ಸು ಸುಮಾರು 44 ವರ್ಷ ಇತನು ಬಿಜೆಪಿ ಚಿಹ್ನೆಯ ಪಾಂಪ್ಲೇಟ್ ಮತ್ತು 100 ಪುಟದ ಒಂದು ನೋಟ್ ಬುಕ್ ಹಿಡಿದು ನಿಂತಿದ್ದನು, ಸದರಿ ನೋಟ್ ಬುಕ್ ನ್ನು ತೆಗೆಸಿ ನೋಡಿದಾಗ ಅದರಲ್ಲಿ 500 ಮುಖ ಬೆಲೆಯ

12 ನೋಟುಗಳು ಒಟ್ಟು ರೂ. 6000 ಹಣ ಇತ್ತು. ಆತನ ಬಳಿ ಕೆಎ-42-ವೈ-0812 ಹೊಂಡಾ ಆ್ಯಕ್ಟೀವಾ ಸ್ಕೂಟರ್ ಇತ್ತು. ಸದರಿ ಆರೋಪಿಯ ಬಳಿ ಇದ್ದ ರೂ.6000 ಹಣ ಮತ್ತು ಬಿಜೆಪಿ ಚಿಹ್ನೆಯ ಪಾಂಪ್ಲೆಟ್, ನೋಟ್ ಬುಕ್ ಮತ್ತು ಸ್ಕೂಟರ್ ಜಪ್ತು ಮಾಡಿಕೊಂಡು ಪೊಲೀಸ್ ಠಾಣೆಗೆ ನೀಡಿರುತ್ತೇನೆ. ಸ್ಥಳದಲ್ಲೆ ಸ್ಥಳ ಮಹಜರ್ ಕ್ರಮ ಜರುಗಿಸಿ ಸದರಿ ಮೇಲೆ ಹೇಳಿದ ವಸ್ತುಗಳನ್ನು ಜಪ್ತು ಮಾಡಿಕೊಂಡಿರುತ್ತೇನೆ. ಸ್ಥಳ ಮಹಜರ್ ನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಪಿರ್ಯಾದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಸಿ ಎಂ ಕೆ ವಕೀಲರಿಂದಃ**

ಈ ಕೇಸಿನಲ್ಲಿ ಅಮಾನತ್ತು ಪಂಚನಾಮೆಯನ್ನು ಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನೇ ಮಾಡಿರುತ್ತೇನೆ ಎನುತ್ತಾರೆ. ಎಷ್ಟು ಗಂಟೆ ಯಿಂದ ಎಷ್ಟು ಗಂಟೆ ವರೆಗೂ ಅಮಾನತ್ತು ಪಂಚನಾಮೆಯನ್ನು ರಾತ್ರಿ 11-40 ರಿಂದ 12-45ರವರೆಗೆ ಜರುಗಿಸಿರುತ್ತೇನೆ. ಈ ಕೇಸಿನಲ್ಲಿ ಆರೋಪಿತನ ಬಳಿ ಹಣವನ್ನು ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ಆರೋಪಿತನಿಂದ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ಅಮಾನತ್ತು ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ತಮ್ಮ ಪಿರ್ಯಾದಿನಲ್ಲಿ ಇಂತ ವಾಹನದಲ್ಲಿ ಓಡಾಡುತ್ತಿದ್ದೇವು ಎಂದು ಬರೆದಿದ್ದೀರ ಎಂದರೆ ಇಲ್ಲ

ಎನ್ನುತ್ತಾರೆ. ಸದರಿ ದಿನಾಂಕದಂದು ತಾವು ಕರ್ತವ್ಯ ನಿರ್ವಹಿಸಿದ ಬಗ್ಗೆ ಚಲನವಲನ ರಿಜಿಸ್ಟರ್ ನಲ್ಲಿ ಬರೆದಿದ್ದೀರಾ ಎಂದರೆ ಅಗತ್ಯ ಇಲ್ಲ ಎನ್ನುತ್ತಾರೆ. ಒಂದೊಂದು ಫ್ಲೈ ಗಾರ್ಡ್ ಗೂ ಒಂದೊಂದು ಫೋಟೋ ಗ್ರಾಫರ್ ಮತ್ತು ಪೊಲೀಸ್ ನೇಮಿಸಿರುತ್ತಾರೆ ಎಂದರೆ ಸರಿ, ಸದರಿ ದಿನದಂದು ಯಾವ ಹೆಸರಿನ ಫೋಟೋಗ್ರಾಫರ್ ಮತ್ತು ಪೊಲೀಸ್ ಇದ್ದರು ಎಂದರೆ ಕ್ಯಾಮೇರಾಮ್ಯಾನ್ ಹೆಸರು ನೆನಪಿಲ್ಲ ಆದರೆ ಪೊಲೀಸ್ ಕರಿಯಪ್ಪ ಇದ್ದರು ಎನ್ನುತ್ತಾರೆ. ಆರೋಪಿತನ ಮೇಲೆ ದಾಳಿ ಮಾಡಿದೆ ಎಂದು ಹೇಳುವ ಕಾಲಕ್ಕೆ ವಿಡಿಯಾೋ ಚಿತ್ರೀಕರಣ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ಒಂದು ಮೇಳೆ ಘಟನೆ ನಡೆಯಿತು ಎಂದು ಹೇಳುವ ಸಮಯದಲ್ಲಿ ಆರೋಪಿ ತಾವು ಮೇಲೆ ಹೇಳಿದ ಹಾಗೆ ಬಿಜೆಪಿ ಚಿಹ್ನೆಯ ಪಾಂಪ್ಲೆಟ್ ಗಳು, ನೋಟ್ ಬುಕ್ ನಲ್ಲಿ 500 ಮುಖಬೆಲೆಯ ನೋಟ್ ಗಳನ್ನು ಇಟ್ಟು ಕೊಂಡಿದ್ದರೆ ವಿಡಿಯೋ ಚಿತ್ರೀಕರಣ ಮಾಡಿಸುತ್ತಿದ್ದೇವು ಆತನ ಬಳಿ ಇಲ್ಲದ ಕಾರಣ ಮಾಡಿಸಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಕೊ್ಕಸ್ಕರ ಆರೋಪಿ ಯಾವುದೆ ಅಪರಾಧ ಮಾಡದಿದ್ದರು ಸುಳ್ಳು ಪಿರ್ಯಾದು ನೀಡಿದ್ದೇನೆ ಎಂರದೆಸ ರಿಯಲ್ಲ. ಆರೋಪಿ ಬಿಜೆಪಿಯ ಪಾಂಪ್ಲೆಟ್ ಗಳನ್ನು ಹಿಡಿದು ಪ್ರಚಾರ ಮಾಡುತ್ತಿರಲಿಲ್ಲ ಮತ್ತು ಈ ಮೇಲೆ ಹೇಳಿದ ವಸ್ತುಗಳನ್ನು ಅಮಾನತ್ತು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.